# Jo jo jo jo ramgadhaama

Kannada lyrics on top, English singing lyrics below

## Kannada

ಜೋ ಜೋ ಜೋ ಜೋ ರಂಗಧಾಮಜೋ ಜೋ ಜೋ ಜೋ ರಣಭೀಮ ||2||

ಜೋ ಜೋ ಭಕ್ತರ ಕಷ್ಟನಿರ್ಧೂಮ ಜೋ ಜೋ ದಶರಥ ರಾಮ ನಿಸ್ಸೀಮ ||2|| ಜೋ ಜೋ

ಭೂಮಿಯ ಚಿನ್ನದ ತೊಟ್ಟಿಲ ಮಾಡಿ, ಸೋಮಸೂರ್ಯರೆಂಬ ಕಲಶವ ಹೂಡಿ||2||ನೇಮದಿ ವೇದಗಳ ಸರಪಣಿ ಮಾಡಿ, ಆ ಮಹಾಕಾಶಕ್ಕೆ ಕೊಂಡಿಗಳ ಹಾಕಿ||1|| ಜೋ ಜೋ

ವಸುದೇವಸುತನಾದ ಮುದ್ದುಮುರಾರಿ, ಅಸುರೆ ಪೂತನಿಯ ಪ್ರಾಣಾಪಹಾರಿ||2||ಅಸಮ ಸಾಹಸಮಲ್ಲ ದೈತ್ಯರ ವೈರಿ, ಶಿಶುವಾಗಿ ದೇವಕಿಗೆ ಆನಂದ ತೋರಿ ||1|| ಜೋ ಜೋ

ತಮನ ಮರ್ದಿಸಿ ವೇದತತಿಗಳನು ತಂದೆ, ಸುಮನಸರಿಗಾಗಿ ಮಂದರಪೊತ್ತುನಿಂದೆ||2||ಕ್ಷಮೆಗಾಗಿ ಪೋಗಿ ಹಿರಣ್ಯಕನಕೊಂದೆ, ನಮಿಸಿ ಕರೆದರೆ ಕಂಬದಿಂದ್ಹೊರಟು ಬಂದೆ ||1|| ಜೋ ಜೋ

ತರಳನಾಗಿ ಬಲಿಯ ದಾನವ ಬೇಡ್ದೆ, ಪರಶು ಧರಿಸಿ ಕ್ಷತ್ರಿಯರನು ಸವರಿದೆ ||2|| ದುರುಳ ರಾವಣನ ಶಿರವ ಚೆಂಡಾಡಿದೆ ಚರಿಸಿ ಮನೆಗಳ ಪಾಲ ಮೊಸರನ್ನು ಕುಡಿದೆ ||1|| ಜೋ ಜೋ

ಬುದ್ಧನಾಗಿ ಪತಿವ್ರತೆರ ಆಳಿದೆಯಲ್ಲ ಮುದ್ದು ತುರಗವನೇರಿ ಕಲ್ಕ್ಯನಾದ್ಯಲ್ಲ||2|| ಪದ್ಮನಾಭ ಸಿರಿ ಭಕ್ತವತ್ಸಲ ನಿದ್ರೆಯ ಮಾಡಯ್ಯ ಶ್ರೀ ರಂಗವಿಠಲ |||2||

---

## English

Jo jo jo jo ramgadhaamajo jo jo jo ranabheema | ||2|| |

Jo jo bhaktara kashtanirdhooma jo jo dasharatha raama nisseema | ||2|| | jo jo

Bhoomiya chinnada tottila maadi, somasooryaremba kalashava hoodi| ||2|| |nemadi vedagala sarapani maadi, aa mahaakaashakke komdigala haaki| ||1|| | jo jo

Vasudevasutanaada muddumuraari, asure pootaniya praanaapahaari| ||2|| |asama saahasamalla daityara vairi, shishuvaagi devakige aanamda tori | ||1|| | jo jo

Tamana mardisi vedatatigalanu tamde, sumanasarigaagi mamdarapottunimde| ||2|| |kshamegaagi pogi hiranyakanakomde, namisi karedare kambadimdhoratu bamde | ||1|| | jo jo

Taralanaagi baliya daanava bedde, parashu dharisi kshatriyaranu savaride | ||2|| | durula raavanana shirava chemdaadide charisi manegala paala mosarannu kudide | ||1|| | jo jo

Buddhanaagi pativratera aalideyalla muddu turagavaneri kalkyanaadyalla| ||2|| | padmanaabha siri bhaktavatsala nidreya maadayya shree ramgavithala || ||2|| |